(ದಿನಾಂಕಃ 13.10.2025 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು)

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ *2* ರಿಂದ *5* ರವರ ಪರ ವಕೀಲರಾದ ಶ್ರೀ ಬಿ.ಎಸ್.ವಿ ರವರಿಂದ ಃ-**

4. 1954 ರಲ್ಲಿ ನಮ್ಮ ಸಂಘ ಪ್ರಾರಂಭವಾದಾಗ ನಮ್ಮ ಸಂಘವನ್ನು ನೊಂದಣಿ ಮಾಡಿಸಿರುವುದಿಲ್ಲ. ನಮ್ಮ ಸಂಘದ ಉದ್ದೇಶ ಮತ್ತು ನಮ್ಮ ಸಂಘದ ನಿಯಮಾವಳಿಗಾಗಿ ಸಂಘವನ್ನು ನೊಂದಣಿ ಮಾಡಲೇ ಮಾಡಬೇಕಾಗುತ್ತದೆ ಎಂದರೆ ಸಾಕ್ಷಿಯು ನಮ್ಮ ತಂದೆಯವರ ಕಾಲದಿಂದ ಪ್ರಾರಂಭವಾಗಿದ್ದು ಅದು ಏಕೆ ನೊಂದಣಿಯಾಗಿರುವುದಿಲ್ಲ ಎಂದು ಗೊತ್ತಿಲ್ಲ.

5. ನಮ್ಮ ಸಂಘಕ್ಕೆ ಆಸ್ತಿಯನ್ನು ಪಡೆಯಬೇಕಾದರೆ ಸರ್ಕಾರದಿಂದ ಪೂರ್ವಾನುಮತಿ ಬೇಕಾಗುತ್ತದೆ ಎಂದರೆ ಸರಿಯಲ್ಲ. ನಾನು ನಮ್ಮ ಸಂಘದ ಬೈಲಾಸ್ ಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ.

6. ನಾನು ನನ್ನ ದಾವಾ ವಾದ ಪತ್ರದಲ್ಲಿ ಆಸ್ತಿ ಹೇಗೆ ಬಂದಿರುತ್ತದೆ ಎಂಬುದರ ಬಗ್ಗೆ ಉಲ್ಲೇಖ ಮಾಡಿರುವುದಿಲ್ಲ ಎಂದರೆ ಸರಿ. ನಾನು ದಾವಾ ಆಸ್ತಿಯಲ್ಲಿ ಕಟ್ಟಡವನ್ನು ಕಟ್ಟಲು ಯಾವುದೇ ಪರವಾನಿಗೆಯನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿ.

7. ನಾನು ದಾವಾ ಆಸ್ತಿಯಲ್ಲಿ ಕಟ್ಟಡವನ್ನು ಯಾವ ಅನುದಾನದಲ್ಲಿ ಕಟ್ಟಿರುತ್ತೇನೆ ಎಂದು ತೋರಿಸಿರುವುದಿಲ್ಲ ಎಂದರೆ ಸರಿ ಮತ್ತು ಕಟ್ಟಡ ಕಟ್ಟಿದ ವರ್ಷ ತೋರಿಸಿರುವುದಿಲ್ಲ ಎಂದರೆ ಸರಿ.

8. ಡಿ.ಆರ್ ನಂಃ 33 ಮತ್ತು 34 ಡಿ.ಆರ್ ಗಳ ಡಿಮಾಂಡ್ ಎಕ್ಸ್ ಟ್ರ್ಯಾಕ್ಟುಗಳನ್ನು ಹೊರತುಪಡಿಸಿ ಬೇರೆ ಡಿ.ಆರ್ ನಂಬರ್ ಗಳಲ್ಲಿ ಹೆಸರು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ದಾಖಲೆಗಳಲ್ಲಿ ದಾವಾ ಆಸ್ತಿಯ ಉದ್ದ ಅಗಲ ಇರುವುದಿಲ್ಲ ಎಂದು ಸೂಚಿಸಿದರೆ ಸರಿಯಲ್ಲ.

9. ನಾನು ಹಾಜರುಪಡಿಸಿದ ನಿಪಿ–1 ರಿಂದ ನಿಪಿ–17 ರವರೆಗೆ ದಾಖಲೆಗಳಲ್ಲಿ ದಾವಾ ಆಸ್ತಿಯ ವಿಸ್ತೀರ್ಣ ಇರುವುದಿಲ್ಲ ಎಂದು ಸೂಚಿಸಿದರೆ ಸರಿ. ದಾವಾ ಸಲ್ಲಿಸುವಾಗ ದಾವಾ ಆಸ್ತಿಯು ನಮ್ಮ ಹೆಸರಿನಲ್ಲಿ ಇರಲಿಲ್ಲ ಎಂದು ಸೂಚಿಸಿದರೆ ಸರಿ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ ಅದು 2025–26 ರ ದೃಢೀಕೃತ ಡಿಮಾಂಡ್ ಎಕ್ಸ್ ಟ್ರ್ಯಾಕ್ಟಾಗಿದ್ದು ಸದರಿ ಡಿಮಾಂಡ್ ಎಕ್ಸ್ ಟ್ರ್ಯಾಕ್ಟ್ ಪ್ರಕಾರ ಡಿಮಾಂಡ್ ನಂ 33 ಮತ್ತು 34 ಗ್ರಾಮ ಪಂಚಾಯ್ತಿಯ ಹೆಸರಿನಲ್ಲಿ ಇರುತ್ತವೆ ಎಂದು ಸೂಚಿಸಿದರೆ ಸರಿ. ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಅವುಗಳನ್ನು ನಿಡಿ–1 ಮತ್ತು ನಿಡಿ–2 ಎಂದು ಗುರುತಿಸಲಾಯಿತು.

10. ಡಿಮಾಂಡ್ ಎಕ್ಸ್ ಟ್ರ್ಯಾಕ್ಟ್ 2016 ರಿಂದ 2018 ರವರೆಗೆ ದಾವಾ ಆಸ್ತಿ ಗ್ರಾಮ ಪಂಚಾಯ್ತಿ ಹೆಸರಿನಲ್ಲಿ ಇರುತ್ತದೆ ಎಂದು ಸೂಚಿಸಿದರೆ ಸರಿ. ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಅವುಗಳನ್ನು ಕ್ರಮವಾಗಿ ನಿಡಿ–3 ಮತ್ತು ನಿಡಿ–4 ಎಂದು ಗುರುತಿಸಲಾಯಿತು.

11. ಸಾಕ್ಷಿಗೆ ಈ ಹಂತದಲ್ಲಿ ಒಂದು ದಾಖಲೆಯನ್ನು ತೋರಿಸಿದ್ದು ಅದು ದಾವಾ ಆಸ್ತಿಗೆ ಸಂಬಂಧಪಟ್ಟ ಪುರಪ್ಪೆಮನೆ ಗ್ರಾಮ ಪಂಚಾಯ್ತಿ ಯವರು ಜರುಗಿಸಿದ ಸಾಮಾನ್ಯ ಸಭೆಯ ನಡಾವಳಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಅದನ್ನು ನಿಡಿ–5 ಎಂದು ಗುರುತಿಸಲಾಯಿತು.

12. ನಾನು ನಿಡಿ–5 ನ್ನು ಪ್ರಶ್ನಿಸಿರುವುದಿಲ್ಲ ಎಂದರೆ ಸರಿ. ಸಾರ್ವಜನಿಕ ಆಯುರ್ವೇದಿಕ್ ಆಸ್ಪತ್ರೆ ಸರ್ವೇ ನಂ. 164 ರಲ್ಲಿ ಇರುತ್ತದೆ. ಸರ್ವೇ ನಂ. 164 ರಲ್ಲಿ ನಮಗೆ ಯಾವುದೇ ಆಸ್ತಿ ಇರುವುದಿಲ್ಲ ಎಂದು ಸೂಚಿಸಿದರೆ ಸರಿ. ಸಾಕ್ಷಿ ಮುಂದುವರೆದು ಅದು ಪೋಡಿಯಾಗಿರುತ್ತದೆ ಎಂದು ನುಡಿಯುತ್ತಾರೆ.

13. ದಾವಾ ಆಸ್ತಿಯಲ್ಲಿ ಸರ್ಕಾರಕ್ಕೆ ಸಂಬಂಧಪಟ್ಟ ವೈಧ್ಯಕೀಯ ಆಯುರ್ವೇಧಿಕ್ ಆಸ್ಪತ್ರೆ ಇರುತ್ತದೆ ಎಂದು ಸೂಚಿಸಿದರೆ ಸರಿ. ಸದರಿ ಆಸ್ಪತ್ರೆ ಚಾಲನೆಯಾಗಿ ಸುಮಾರು 4–5 ವರ್ಷಗಳಾಗಿರುತ್ತದೆ ಎಂದು ಸೂಚಿಸಿದರೆ ಸರಿ.

14. ನಾವು ಈ ದಾವೆಯನ್ನು ಆಸ್ಪತ್ರೆ ಕಟ್ಟಬಾರದು ಎಂದು ದಾಖಲಿಸಿರುತ್ತೆವೆ ಎಂದರೆ ಸರಿ. ಸಾಕ್ಷಿ ಈ ನ್ಯಾಯಾಲಯದ ಆದೇಶ ಇದ್ದರೂ ಸಹ ಆಸ್ಪತ್ರೆ ಕಟ್ಟಡವನ್ನು ಕಟ್ಟಿರುತ್ತಾರೆ ಎಂದು ನುಡಿಯುತ್ತಾರೆ.

15. ನಮ್ಮ ಮತ್ತು ಆಯುರ್ವೇದಿಕ್ ಆಸ್ಪತ್ರೆ ಅಧಿಕಾರಗಳ ಜೊತೆ ಲಿಖಿತ ಕರಾರು ಪತ್ರವಿರುತ್ತದೆ. ಅದನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದನ್ನು ಹಾಜರುಪಡಿಸುತ್ತೇವೆ ಎಂದು ನುಡಿಯುತ್ತಾರೆ.

16. ಡಿ.ಆರ್ ನಂ. 33 ಮತ್ತು ಡಿ.ಆರ್ ನಂ 34 ಬೇರೆ ಬೇರೆ ಆಸ್ತಿಗಳಾಗಿರುತ್ತವೆ ಎಂದು ಸೂಚಿಸಿದರೆ ಸರಿ. ನಾನು ದಾವಾ ಆಸ್ತಿಯ ಕಚ್ಚಾ ನಕಾಶೆಯನ್ನು ಹಾಜರುಪಡಿಸಿರುವುದಿಲ್ಲ.

17. ನಾನು ದಾವಾ ಆಸ್ತಿಯ ವಿಸ್ತೀರ್ಣವನ್ನು ಅಂದಾಜಿನ ಆಧಾರದ ಮೇಲೆ ತೋರಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಈ ದಾವೆಯಲ್ಲಿ ದಾವಾ ಆಸ್ತಿಯ ವಿಸ್ತೀರ್ಣವನ್ನು ತೋರಿಸುವ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ.

18. 1985 ರಲ್ಲಿ ಆಯುರ್ವೇದಿಕ್ ಸರ್ಕಾರಿ ಆಸ್ಪತ್ರೆ ಪ್ರಾರಂಭವಾಗಿರುತ್ತದೆ. ನಾನು ದಾವಾ ಸ್ವತ್ತಿನ ಸ್ವಾಧೀನವನ್ನು ಹೊಂದಿರುವುದಿಲ್ಲ ಎಂದು ಸೂಚಿಸಿದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ದಾವಾ ಆಸ್ತಿಯ ಕಟ್ಟಡದಲ್ಲಿ ನಾವು ಆಯುರ್ವೇದಿಕ್ ಆಸ್ಪತ್ರೆ ನಡೆಸಲು ಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ.

19. ನಾನು ದಾವಾ ಅಸ್ತಿಯ ಸ್ವಾಧೀನವನ್ನು ಹೊಂದಿರುವುದಿಲ್ಲ ಎಂದರೆ ಸರಿಯಲ್ಲ. ನನಗೂ ದಾವಾ ಆಸ್ತಿಗೂ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ ಎಂದು ಸೂಚಿಸಿದರೆ ಸರಿಯಲ್ಲ.

**<u>ಮರು ವಿಚಾರಣೆಃ ಇರುವುದಿಲ್ಲ.</u>**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸ. ಎಂ. ಒ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಹೊಸನಗರ.